ದಿವ್ಯರಹಸ್ಯವನ್ನು ತಿಳಿದಂತೆ ಹೇಳುವುದು ಮತ್ತು ಅದರ ಪರಿಹಾರಗಳನ್ನು ಸೂಚಿಸಿ ಆ ಮೂಲಕ ತಮ್ಮ ಸಂಪಾದನೆಗೆ ದಾರಿ ಮಾಡಿಕೊಳ್ಳುವುದನ್ನು ಕಾದಂಬರಿ ಚಿತ್ರಿಸಿದೆ. ಓದುಗರಿಗೆ ಈ ಎಲ್ಲ 'ಜ್ಯೋತಿಷ ಪ್ರಶ್ನೆ'ಗಳ ರಹಸ್ಯ ಮೊದಲೇ ತಿಳಿದಿರುವುದರಿಂದ ತಂತ್ರಿಗಳ ಜ್ಯೋತಿಷ ಹಾಸ್ಯಾಸ್ಪದವಾಗಿ ಕಾಣುವುದು ಸಹಜವಾಗಿದೆ. ಉದಾಹರಣೆಗೆ ಗಂಗಕ್ಕೆಗೆ ಒದಗಿದ ಆಪತ್ತು ಯಾವುದು ಎಂದು ಅವಳ ಅಪ್ಪ ಜ್ಯೋತಿಷದ ಮೂಲಕ ತಿಳಿದುಕೊಳ್ಳಲು ಹೋದಾಗ ಜ್ಯೋತಿಷಿಯಾದ ತಂತ್ರಿಗಳು ಕವಡೆ ಹಾಕಿ, 'ಗಂಗಕ್ಕೆಗೆ ಬಂದ ಆಪತ್ತನ್ನು ಜಾರಂದಾಯ ತಪ್ಪಿಸಿದ' ಎನ್ನುತ್ತಾರೆ. ನಿಜವಾಗಿಯಾದರೆ ಜಾರಂದಾಯನ ಸನ್ನಿಧಾನದಲ್ಲಿಯೇ ಅವಳ ಮೇಲೆ ಅತ್ಯಾಚಾರವಾಗಿರುತ್ತದೆ, ಮತ್ತು ಅದು ಓದುಗರಿಗೆ ಈಗಾಗಲೇ ಗೊತ್ತಿರುತ್ತದೆ! ಹೀಗೆ ಅಗೌಕಿಯವರು ವ್ಯಂಗ್ಯವನ್ನು ಈ ಕಾದಂಬರಿಯುದ್ದಕ್ಕೂ ಪರಿಣಾಮಕಾರಿಯಾಗಿ ಬಳಸುತ್ತಾರೆ.

ಅ.ಗೌ. ಕಿನ್ನಿಗೋಳಿ ಅವರು ಪ್ರಗತಿಪರ ಚಿಂತಕರಾದುದರಿಂದ ಕ್ರಾಂತಿಕಾರಕವಾದ ವಿಚಾರಗಳನ್ನು ಹೇಳಿದ್ದಾರೆ. ಉದಾಹರಣೆಗೆ ಜಾರಂದಾಯ ದ್ರಾವಿಡ ದೈವ ಮತ್ತು ಶಿವ ಆರ್ಯರ ದೇವರು; ಜಾರಂದಾಯನ ಗುಡಿಯಿದ್ದ ಜಾಗದಲ್ಲಿ ಶಿವನಿಗೆ ಆಲಯ ನಿರ್ಮಾಣವಾಗಿ ಜಾರಂದಾಯನನ್ನು ಹೊರಗೆ ಸಣ್ಣ ಗುಡಿಯಲ್ಲಿ ಸ್ಥಾಪಿಸಲಾಗುತ್ತದೆ. 'ಕನಸಿನಲ್ಲಿ ಶಿವನೇ ಬಂದು ಹೀಗೆ ಮಾಡಲು ಹೇಳಿದ'ನೆಂದು ಜನರನ್ನು ನಂಬಿಸಿದವರು ಊರಿನ ಮುಖಂಡ ಸಿದ್ಧಣ್ಣ ಸೆಟ್ಟಿಯವರು ಮತ್ತು ಇದರಲ್ಲಿ ಪಾಲುದಾರರಾಗಿ ತಾವೂ ಲಾಭ ಮಾಡಿಕೊಂಡವರು ಶಾಮ ತಂತ್ರಿಗಳು (ವೈದಿಕರು).

ಈ ಕಾದಂಬರಿ ಒಂದು ವಿಶಿಷ್ಟ ಪ್ರಾದೇಶಿಕ ಕಾದಂಬರಿಯಾಗಿದೆ. ಲೇಖಕರು ದಕ್ಷಿಣ ಕನ್ನಡದ ಹಲವಾರು ಘಟನೆಗಳನ್ನು ಮತ್ತು ವಿದ್ಯಮಾನಗಳನ್ನು ಇದರಲ್ಲಿ ದಾಖಲಿಸಿದ್ದಾರೆ. ಊರೊಂದರಲ್ಲಿ ಹುಟ್ಟಿಕೊಂಡಿದ್ದದಾರಿಹೋಕರನ್ನುದರೋಡೆಮಾಡುವ ಪುಂಡರ ತಂಡದ ಸಹಕಾರದಿಂದ ಸಂಬಂಧಿಕರೇ ಊರಿನ ಗಣ್ಯ ವ್ಯಕ್ತಿಯೊಬ್ಬನನ್ನು ಕೋಲಕ್ಕೆ ಹೋಗುವ ದಾರಿಯಲ್ಲಿ ಕೊಲ್ಲಿಸಿದ ಘಟನೆ ಹಿಂದೆ ನಡೆದ ನೈಜ ಚರಿತ್ರೆಯ ಭಾಗಗಳೇ ಆಗಿವೆ. ಹಾಗೆಯೇ ಅನಂತನ ಪಾತ್ರವು ಕಾದಂಬರಿಕಾರರ ಪ್ರತಿನಿಧಿ ಪಾತ್ರವಾಗಿದೆ. ಹೀಗೆ ಒಂದು ಪ್ರದೇಶದ, ಒಂದು ಕಾಲದ ಬದುಕನ್ನು ಸಾಹಿತ್ಯೀಕರಣ ಮಾಡಿದ ಕಾರಣದಿಂದಾಗಿ, ಮತ್ತು ವಸಾಹತುಶಾಹಿಯ ಪರಿಣಾಮವನ್ನು ಸಾಂಕೇತಿಕವಾಗಿ, ಪರಿಣಾಮಕಾರಿಯಾಗಿ ಹೇಳಿರುವ ಕಾರಣದಿಂದ 'ಒಡ್ಡಿದ ಉರುಳು' ಒಂದು ಗಮನಾರ್ಹ ಕಾದಂಬರಿಯಾಗಿದೆ.

**ಅ. ಗೌ. ಕಿನ್ನಿಗೋಳಿ:** ಕರಾವಳಿಯ ಮೊದಲನೆಯ ಗಣ್ಯ ದಲಿತ ಕವಿ ಅಚ್ಯುತಗೌಡ ಕಿನ್ನಿಗೋಳಿ (1921-1976) 'ಶಿವಲೇಶ್ಯೆ', 'ಯೋಗಲಹರಿ (ಮೂರು ಖಂಡಕಾವ್ಯಗಳು)', 'ಕ್ಷಾತ್ರ ತೇಜ' ಮುಂತಾದ ಶ್ರೇಷ್ಠ ಖಂಡಕಾವ್ಯಗಳನ್ನು ಬರೆದ ನವೋದಯ ಕವಿಪರಂಪರೆಯ ಕೊನೆಯ ಕೊಂಡಿ. ಅವರ ಖಂಡಕಾವ್ಯಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಒಂದು ಸಂಪುಟವಾಗಿ ಮುದ್ರಿಸಿದೆ. 'ಒಡ್ಡಿದ ಉರುಳು' (1957) ಅವರ ಪ್ರಸಿದ್ಧ ಕಾದಂಬರಿ. ಇದು ಬಹಳ ಜನಪ್ರಿಯವಾಗಿ ಬಹುಬೇಗನೆ ಇದರ ಮೊದಲನೆಯ ಮುದ್ರಣದ ಪ್ರತಿಗಳು ಮುಗಿದರೂ ಮರುಮುದ್ರಣ ಸಾಧ್ಯವಾಗಲಿಲ್ಲ. 'ಸಂಗ್ರಾಮ ಸಿಂಹ' ಎನ್ನುವ ಐತಿಹಾಸಿಕ ಗದ್ಯ ಕಥನವೊಂದನ್ನೂ ಅವರು ಪ್ರಕಟಿಸಿದ್ದಾರೆ. ಅಗೌಕಿಯವರು 'ಅವಿನಾಶಿ' ಎಂಬ ಕಾವ್ಯನಾಮದಿಂದ ಹಲವು ಹರಟೆ - ವಿಡಂಬನೆಗಳನ್ನೂ ('ಸರಸ - ವಿರಸ' ಎಂಬ ಕೃತಿ ಪ್ರಕಟವಾಗಿದೆ), ಏಕಾಂಕ ನಾಟಕಗಳನ್ನೂ ಬರೆದಿದ್ದರು. ಭಾವಗೀತೆಗಳು, ನವ್ಯ ಕವನಗಳು ಮತ್ತು ಸಾಹಿತ್ಯ ವಿಮರ್ಶೆಯನ್ನೂ ಅವರು ಬರೆದಿದ್ದಾರೆ. ('ಸರಸ -ವಿರಸ' ಎಂಬ ಕೃತಿ ಪ್ರಕಟವಾಗಿದೆ) ಅಗೌಕಿ ಅವರು ಕಿನ್ನಿಗೋಳಿಯ ಲಿಟ್ಲ್ ಫ್ಲವರ್ ಗರ್ಲ್ಸ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದರು. ನಿಜಜೀವನದಲ್ಲಿಯೂ ತಮ್ಮದೇ ಆದ ವೈಚಾರಿಕತೆಯನ್ನು ಪ್ರತಿಪಾದಿಸುತ್ತಿದ್ದರು; ಇದರಿಂದ ಕೆಲವರ ವಿರೋಧವನ್ನೂ ಕಟ್ಟಿಕೊಂಡಿದ್ದರು. ಸಾಂಸಾರಿಕವಾಗಿಯೂ ಸಮಸ್ಯೆಗಳನ್ನು ಎದುರಿಸಿದ್ದರು. 'ಒಡ್ಡಿದ ಉರುಳು' ಕಾದಂಬರಿಯಲ್ಲಿ ಅನಂತನ ಪಾತ್ರವು ಅವರದೇ ಆತ್ಮಕಥೆಯಂತೆ ಇದೆ. ಅವರು ನಿವೃತ್ತಿಯ ಅಂಚಿನಲ್ಲಿದ್ದಾಗ (ಆಗ 55 ವರ್ಷಕ್ಕೆ ಸೇವಾನಿವೃತ್ತಿಯಾಗುತ್ತಿತ್ತು) ಹೃದಯಾಘಾತದಿಂದ ನಿಧನರಾದರು. ●